# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1436**
ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 16-03-2026
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಮಾದರಿ ಉಪಯೋಗ ಮತ್ತು ಸಿಸ್ಟಮ್ ಇಂಪ್ರೂಮೆಂಟ್ ಯೋಜನೆಯನ್ನು ಜಾರಿಗೊಳಿಸಿದೆಯೇ; ಜಾರಿಗೊಳಿಸಿದ್ದಲ್ಲಿ, ಎಂದಿನಿಂದ ಈ ಯೋಜನೆಯನ್ನು ಜಾರಿಗೊಳಿಸಲಾಗಿದ ಮತ್ತು ಇದರ ಪ್ರಯೋಜನಗಳೇನು; | ಬೆಸ್ಕಾಂ ಕಂಪನಿಯು ಮಾದರಿ ಉಪ ವಿಭಾಗ ಯೋಜನೆಯನ್ನು ಬೆಂಗಳೂರು ನಗರ ವ್ಯಾಪ್ತಿಯ S-10, S-13, E-8, N-4 ಉಪ ವಿಭಾಗಗಳಲ್ಲಿ ಹಾಗೂ ಸಿಸ್ಟಮ್ ಇಂಪ್ರೂಮೆಂಟ್ ಯೋಜನೆಯನ್ನು ಬೆಂಗಳೂರು ನಗರ ವ್ಯಾಪ್ತಿಯ E-3 ಉಪ ವಿಭಾಗದಲ್ಲಿ 2017-18ರಲ್ಲಿ ಪ್ರಾರಂಭಗೊಳಿಸಲಾಗಿದೆ. ಸದರಿ ಯೋಜನೆಗಳು 2019-2020 ರಲ್ಲಿ ಪೂರ್ಣಗೊಂಡಿರುತ್ತದೆ. ಮುಂದುವರೆದು, ವಿತರಣ ಜಾಲವನ್ನು ವಿಸ್ತರಿಸುವ ಮತ್ತು ಬಲವರ್ಧನೆಗೊಳಿಸುವ ಅಗತ್ಯ ಕಾಮಗಾರಿಗಳನ್ನು ಪ್ರತಿ ವರ್ಷವೂ ಬಂಡವಾಳ ಕಾಮಗಾರಿಗಳಡಿಯಲ್ಲಿ ಕೈಗೊಳ್ಳಲಾಗುತ್ತಿದೆ. ಪ್ರಯೋಜನೆಗಳು ಕೆಳಕಂಡಂತಿದೆ:<br>• ವಿದ್ಯುತ್ ಅಡೆತಡೆಗಳನ್ನು ಕಡಿಮೆ ಮಾಡುವುದು.<br>• ವಿದ್ಯುತ್ ಸರಬರಾಜಿನ ಗುಣಮಟ್ಟವನ್ನು ಸುಧಾರಿಸುವುದು.<br>• ನಗರ ಪ್ರದೇಶಗಳಲ್ಲಿ ಭೂಗತ ಕೇಬಲ್ ವ್ಯವಸ್ಥೆಯ ಬಳಕೆಯಿಂದ ಸುರಕ್ಷತಾ ಪರಿಸರ ರಚಿಸುವುದು ಹಾಗು ವಿದ್ಯುತ್ ಅಪಘಾತಗಳನ್ನು ಕಡಿಮೆ ಮಾಡುವುದು. |
| ಆ) | ಬೆಸ್ಕಾಂ ಸಂಸ್ಥೆಯು ಮಾದರಿ ಉಪ ವಿಭಾಗ ಯೋಜನೆಯ ಅಡಿಯಲ್ಲಿ ಎಷ್ಟು ಹೊಸಲಿಂಕ್ ಲೈನ್‌ಗಳನ್ನು ಮತ್ತು ಹೊಸ ಫೀಡರ್‌ಗಳನ್ನು ಅಳವಡಿಸಿದೆ; (ಕಳೆದ 3 ವರ್ಷಗಳಲ್ಲಿ ಅಳವಡಿಸಿರುವ ಹೊಸಲಿಂಕ್ ಲೇನ್ ಮತ್ತು ಹೊಸ ಫೀಡರ್‌ಗಳ ವಿವರಗಳನ್ನು ಒದಗಿಸುವುದು) | ಬೆವಿಕಂಪನಿಯು ಕಳೆದ ಮೂರು ವರ್ಷಗಳಲ್ಲಿ (2023-24, 2024-25, 2025-26) ಮಾದರಿ ಉಪ ವಿಭಾಗ ಯೋಜನೆಯಡಿಯಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿಲ್ಲ. |
| ಇ) | ಬಸ್ಕಾಂ ಸಂಸ್ಥೆಯ ಮಾದರಿ ಉಪ ವಿಭಾಗ ಯೋಜನೆಯ ಅಡಿಯಲ್ಲಿ ಎಷ್ಟು ಓವರ್ ಹೆಡ್‌ಲೈನ್‌ಗಳನ್ನು ಯುಜಿ ಕೇಬಲ್‌ಗಳಾಗಿ ಪರಿವರ್ತಿಸಿದೆ; (ಕಳೆದ 3 ವರ್ಷಗಳಲ್ಲಿ ಬದಲಾಯಿಸಿರುವ ವಿವರಗಳನ್ನು ಒದಗಿಸುವುದು) | |
| ಈ) | ಕಳೆದ ಮೂರು ವರ್ಷಗಳಲ್ಲಿ ಬೆಸ್ಕಾಂ ಸಂಸ್ಥೆಯು ತನ್ನ ವ್ಯಾಪ್ತಿಯಲ್ಲಿ ಮಾದರಿ ಉಪ ವಿಭಾಗ ಯೋಜನೆ ಅಡಿಯಲ್ಲಿ ಎಷ್ಟು ಎಲ್‌ಟಿ ಏರಿಯಲ್ ಕೇಬಲ್‌ಗಳನ್ನು ಅಳವಡಿಸಿದೆ; (ವಿವರಗಳನ್ನು ಒದಗಿಸುವುದು) | |

| | | |
|---|---|---|
| ಊ) | ಕಳೆದ ಮೂರು ವರ್ಷಗಳಲ್ಲಿ ಬೆಸ್ಕಾಂ ಸಂಸ್ಥೆಯು ತನ್ನ ವ್ಯಾಪ್ತಿಯಲ್ಲಿ ಎಷ್ಟು ಕಾಂಪ್ಯಾಕ್ಟ್ ಸಬ್ ಸ್ಟೇಶನ್‌ಗಳನ್ನು ಒದಗಿಸಿರುತ್ತದೆ? (ಪೂರ್ಣ ವಿವರಗಳನ್ನು ಒದಗಿಸುವುದು) | ಬೆಸ್ಕಾಂ ಸಂಸ್ಥೆಯು ಕಳೆದ 03 ವರ್ಷಗಳಲ್ಲಿ ಯಾವುದೇ ಕಾಂಪ್ಯಾಕ್ಟ್ ಸಬ್ ಸ್ಟೇಷನ್ ಸ್ಥಾಪಿಸಿರುವುದಿಲ್ಲ. |

ಸಂಖ್ಯೆ: ಎನರ್ಜಿ 73 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು